**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-1.**

**ಸಂಖ್ಯೆ: ಸಿ1(3) ಪಿಂ.ಸು : 104/2016-17** **ದಿನಾಂಕ: 15/12/2018**

**::ಸುತ್ತೋಲೆ::**

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸಿ ವಯೋನಿವೃತ್ತಿ/ಸ್ವಯಂನಿವೃತ್ತಿ ಹೊಂದುವ ಗೂಪ್-ಎ ಹಾಗೂ ಗ್ರೂಪ್-ಬಿ ಅಧಿಕಾರಿಗಳ ಪಿಂಚಣಿ ಪ್ರಸ್ತಾವನೆಯನ್ನು ಮಂಜೂರಾತಿ ಸಲ್ಲಿಸುವ ಪೂರ್ವದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ.

ಉಲ್ಲೇಖ: 1] ಸರ್ಕಾರದ ಸುತ್ತೋಲೆ ಸಂಖ್ಯೆ: ಆಇ(ವಿಶೇಷ)/101/ಪಿಇಎನ್/2018 ದಿ:08/12/2018.
2] ಈ ಕಛೇರಿ ಸುತ್ತೋಲೆ ಸಂಖ್ಯೆ: ಸಿ1(3) ಪಿಂ.ಸು:104/2016-17 ದಿ:01/03/2017.

**************

ಉಲ್ಲೇಖ(2)ರ ಈ ಕಛೇರಿ ಸುತ್ತೋಲೆಯಲ್ಲಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್-ಎ ಹಾಗೂ ಗ್ರೂಪ್-ಬಿ ಹಾಗೂ ತತ್ಸಮಾನ ವೃಂದದ ಅಧಿಕಾರಿಗಳ ಬಗೆಗಿನ ಪಿಂಚಣಿ ಪ್ರಸ್ತಾವನೆಗಳನ್ನು ಸರ್ಕಾರಕ್ಕೆ/ ಮಹಾಲೇಖಪಾಲರಿಗೆ ಕಳುಹಿಸುವ ಮುನ್ನ ನಿವೃತ್ತರಾಗುವ ಅಧಿಕಾರಿಗಳ ವಿರುದ್ಧ ದೂರು, ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ ಬಾಕಿ ಇದೆಯೇ ಮತ್ತು ಅವರುಗಳಿಂದ ಸರ್ಕಾರಕ್ಕೆ ಯಾವುದಾದರೂ ಹಣಕಾಸು ಬಾಕಿ ಬರಬೇಕೇ ಎಂಬುದರ ವಿವರಗಳ ಬಗ್ಗೆ ಮಾಹಿತಿಯನ್ನು ಸಂಬಂಧಿಸಿದ ಆಯುಕ್ತರ ಕಛೇರಿಯಿಂದ ಕಡ್ಡಾಯವಾಗಿ ಪಡೆದ ನಂತರವೇ ಪಿಂಚಣಿ ಪ್ರಸ್ತಾವನೆಯಗಳನ್ನು ಮಹಾಲೇಖಪಾಲರಿಗೆ/ ಸರ್ಕಾರಕ್ಕೆ ಕಳುಹಿಸುವ ಬಗ್ಗೆ ಕ್ರಮವಹಿಸಲು ತಿಳಿಸಲಾಗಿತ್ತು.

ಗ್ರೂಪ್-ಎ ಹಾಗೂ ಗ್ರೂಪ್-ಬಿ ವೃಂದದ ಮುಖ್ಯಶಿಕ್ಷಕರು ಹಾಗೂ ಸಮಾನಾಂತರ ಹುದ್ದೆಗಳಿಗೆ ನಿವೃತ್ತಿ ನಂತರದ ಪಿಂಚಣಿ ಪ್ರಕರಣ ಇತ್ಯರ್ಥಪಡಿಸುವ ಸಂಬಂಧ ಈ ಕಛೇರಿಯಿಂದ ಬೇ-ಬಾಕಿ ದೃಢೀಕರಣ ಪಡೆಯಲು ಸಂಬಂಧಿಸಿದ ಅಧಿಕಾರಿಗಳು ಈ ಕಛೇರಿಗೆ ವಿಳಂಬವಾಗಿ ಪ್ರಸ್ತಾವನೆಯ ಕಳುಹಿಸುವುದು ಹಾಗೂ ಕಾರಣಾಂತರಗಳಿಂದ ಈ ಕಛೇರಿಯಿಂದ ಬೇ-ಬಾಕಿ ಪ್ರಮಾಣ ಪತ್ರ ನೀಡುವುದು ವಿಳಂಬವಾಗುತ್ತದೆ. ಈ ಕಾರಣದಿಂದ ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆ ಪತ್ರದ ದಿನಾಂಕ: 01/03/2017ರ ಆದೇಶವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆದಿದೆ. ಒಂದುವೇಳೆ ಆಯುಕ್ತರ ಕಾರ್ಯಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದ ಅಧಿಕಾರಿಗಳ ಪ್ರಕರಣದಲ್ಲಿ ಮಾತ್ರವೇ ಈ ಕಾರ್ಯಲಯಕ್ಕೆ ಬೇ-ಬಾಕಿ ನೀಡುವ ಸಲುವಾಗಿ ಪ್ರಸ್ತಾಪಿಸತಕ್ಕದ್ದು.

ಉಲ್ಲೇಖ(1)ರ ಸರ್ಕಾರದ ಸುತ್ತೋಲೆಯಲ್ಲಿ ಪಿಂಚಣಿ ಪ್ರಕರಣಗಳನ್ನು ನಿಗಧಿತ ಕಾಲಾವಧಿಯೊಳಗೆ ತ್ವರಿತವಾಗಿ ಇತ್ಯರ್ಥಗೊಳಿಸುವ ಬಗ್ಗೆ ಸೂಚಿಸಿರುವುದರಿಂದ ತಮ್ಮ ಕಛೇರಿಗಳ ಹಂತದಲ್ಲಿ ನಿವೃತ್ತರಾಗುವ ಅಧಿಕಾರಿಗಳ ದೂರು ಶಿಸ್ತು ಪ್ರಕರಣ, ಇಲಾಖಾ ವಿಚಾರಣೆ ಬಾಕಿ ಇದೆಯೇ ಮತ್ತು ಅವರುಗಳಿಂದ ಸರ್ಕಾರಕ್ಕೆ ಯಾವುದಾದರೂ ಹಣಕಾಸು ಬಾಕಿ ಬರಬೇಕೇ ಎಂಬಿತ್ಯಾದಿ ವಿವರಗಳ ಬಗ್ಗೆ ತಮ್ಮ ಹಂತದಲ್ಲಿ ಪರಿಶೀಲಿಸಿ ಅಧಿಕಾರಿಗಳ ಪಿಂಚಣಿ ವಿಳಂಬಕ್ಕೆ ಆಸ್ಪದ ನೀಡದೆ ಬೇ-ಬಾಕಿಯನ್ನು ನೀಡಿ ಪಿಂಚಣಿ ಪ್ರಸ್ತಾವನೆಯನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ತಿಳಿಸಿದೆ.

[ಡಾ॥ ಪಿ.ಸಿ.ಜಾಫರ್]
**ಆಯುಕ್ತರು**

**ಇವರಿಗೆ:**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಕಲಬುರಗಿ.

2. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ನಿರ್ದೇಶಕರುಗಳು.
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು.
5. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳು.
6. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಸಿಟಿಇ ಮತ್ತು ಡಯಟ್ ಪ್ರಾಂಶುಪಾಲರುಗಳು.
7. ಆಯುಕ್ತರ ಆಪ್ತ ಕಾರ್ಯದರ್ಶಿಯವರು.
8. ಅಧೀಕ್ಷಕರು ಸಿಬ್ಬಂದಿ–1 ಮತ್ತು ಸಿಬ್ಬಂದಿ–1(ಎ) ಅಗತ್ಯ ಕ್ರಮಕ್ಕಾಗಿ.
9. ಸಿಬ್ಬಂದಿ–1 ಶಾಖೆಯ ಎಲ್ಲಾ ವಿಷಯ ನಿರ್ವಾಹಕರಿಗೆ.
10. ಕಛೇರಿ ಪ್ರತಿ.